M.V.C .NO. 2007/2024
C/w MVC No. 2008/2024
PW-2
dated: 08-04-2026.

ಸಾಕ್ಷಿಯನ್ನು ಈ ದಿನ ದಿನಾಂಕ 08-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಎಸ್ ಬಿ ಪಿ ವಕೀಲರಿಂದಃ.

ಈಗ ನನಗೆ 57 ವರ್ಷ ವಯಸ್ಸು ಇದೆ. ಅಪಘಾತ ಆದಾಗ ನನ್ನ ವಯಸ್ಸು 52 ಇತ್ತು. ನಾನು ನನ್ನ 3 ಜನ ಗಂಡು ಮಕ್ಕಳು ಕೂಡಿಯೇ ಇದ್ದೇವೆ ಎಂದರೆ ಸಾಕ್ಷಿ ನಾನು ನನ್ನ ಮಗ ಮಲ್ಲಪನ ಜೊತೆ ಕೂಡಿ ಇದ್ದೇನೆ ಎಂದು ನುಡಿದಿರುತ್ತಾರೆ. ಆತ ನನ್ನ 2 ನೇ ಮಗ ಇರುತ್ತಾನೆ. ನನ್ನ ಮತ್ತು ನನ್ನ 3 ಜನ ಮಕ್ಕಳ ರೇಶನ ಕಾರ್ಡ ಕೂಡಿ ಒಂದೇ ಇರುತ್ತದೆ ಎಂದರೆ ಸರಿಯಲ್ಲ. ನನ್ನ 3 ಜನ ಗಂಡು ಮಕ್ಕಳ ಮದುವೆ ಆಗಿರುತ್ತದೆ. ಅವರು ಬೇರೆ ಆಗಿ ವಾಸವಿದ್ದಾರೆ. ಮೋಟರ ಸೈಕಲ ನಂ. ಕೆಎ 22-ಇಡಿ/5693 ನನ್ನ ಗಂಡನ ಹೆಸರಿನಲ್ಲಿ ಇದೆ. ನನ್ನ ಗಂಡನ ಚಾಲನಾ ಪತ್ರ ಇರುವುದಿಲ್ಲ. ನನ್ನ ಗಂಡನ ಮೋಟರ ಸೈಕಲಗೆ ವಿಮೆ ಮಾಡಿಸಿರುವುದಿಲ್ಲ ಎಂದರೆ ಸರಿ. ಅಪಘಾತ ಸಮಯದಲ್ಲಿ ನಮ್ಮ ಊರಿನಿಂದ ನಮ್ಮ ಜಮಿನಿಗೆ ಹೊಗುತ್ತಿದ್ದೇವು . ಆ ಸಮಯದಲ್ಲಿ ನನ್ನ ಮಕ್ಕಳು ಅವರವರ ಮನೆಯಲ್ಲಿ ಇದ್ದರು. ನನ್ನ ಮಕ್ಕಳ ಹೆಸರು ರಾಜು, ಮಂಜುನಾಥ , ಮಲ್ಲಪ್ಪ ಅಂತಾ ಇರುತ್ತವೆ. ನಾನು ಮತ್ತು ನನ್ನ ಮಕ್ಕಳು ಕೂಡಿಯೇ ಇರುತ್ತೇವೆ ಎಂದು ನನ್ನ ಮಗ ಮಲಪ್ಪ ಪೊಲಿಸ ದೂರಿನಲ್ಲಿ ಬರೆಸಿರುತ್ತಾನೆ ಎಂದರೆ ನಿಜ.

ಅಪಘಾತ ಉಂಟು ಮಾಡಿದ ಮೋಟರ ಸೈಕಲ ನಾವು ಕಚ್ಚಾ ರಸ್ತೆ ಮೂಲಕ ಮೆನ ರಸ್ತೆಗೆ ಸೇರುತ್ತಿದ್ದಾಗ ಮೆನ ರಸ್ತೆಯಲ್ಲಿ ಯರಗಟ್ಟಿ ಕಡೆಯಿಂದ ಬರುತ್ತಿದ್ದನು. ಯರಗಟ್ಟಿ ಬೆಳಗಾವಿ ರಾಜ್ಯ ಹೆದ್ದಾರಿ ಎಂದರೆ ನಿಜ. ಹೀಗಾಗಿ ಸದರಿ ರಸ್ತೆಯಲ್ಲಿ ಹಗಲು ಮತ್ತು ರಾತ್ರಿಯಲ್ಲಿ ವಾಹನ ಸಂಚಾರ

ಇರುತ್ತದೆ ಎಂದರೆ ನಿಜ. ನನ್ನ ಗಂಡನಿಗೆ ಮೋಟರ ಸೈಕಲ ಸರಿಯಾಗಿ ನಡೆಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮೋಟರ ಸೈಕಲ ಸರಿಯಾಗಿ ಓಡಿಸಲು ಬರದೇ ಇದ್ದುದರಿಂದ ಹೀಗಾಗಿ ಅವರು ಡಿಎಲ್ ಪಡೆದಿಲ್ಲ ಎಂದರೆ ಸರಿಯಲ್ಲ. ಚಚಡಿ ಗ್ರಾಮದಿಂದ ಅಪಘಾತ ಸ್ಥಳ 2 ಕಿ.ಮಿ. ಅಂತರದಲ್ಲಿ ಇರುತ್ತದೆ. ನಾವು ನಮ್ಮ ಹೊಲದಿಂದ ಮೆನ ರಸ್ತೆಗೆ ಬರುವಾಗ ಸ್ಕಿಡ ಆಗಿ ಬಿದ್ದು ಅಪಘಾತ ಉಂಟು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅರ್ಧ ಗಂಟೆವರೆಗೆ ಸ್ಥಳ ದಲ್ಲಿ ಇದ್ದೇವು. ಅಪಘಾತ ಸ್ಥಳ ದಿಂದ ನಮ್ಮ ಮನೆ 2 ಕಿಮಿ ಅಂತರದಲ್ಲಿ ಇತ್ತು.

ಅಪಘಾತ ಸ್ಥಳ ದಿಂದ ನನ್ನನ್ನು ಆಸ್ಪತ್ರೆಗೆ ಹಾಲಪ್ಪ ಸೊಮಪ್ಪ ಕರೆಪ್ಪನವರ ಮತ್ತು ನನ್ನ ವಗ ಸ್ಥಳ ಕ್ಕೆ ಬಂದು ಕರೆದುಕೊಂಡು ಹೊಗಿರುತ್ತಾರೆ. ನನ್ನ ಮಗ ಅಪಘಾತ ಆದ ಅರ್ಧ ಗಂಟೆಯಲ್ಲಿ ಸ್ಥಳ ಕ್ಕೆ ಬಂದಿದ್ದನು. ಅಪಘಾತ ಉಂಟು ಮಾಡಿದ ಮೋಟರ ಸೈಕಲ ಸವಾರ ಸ್ಥಳ ದಲ್ಲಿ ಸ್ವಲ್ಪ ನಿಂತು ಹೊರಟು ಹೊದನು. ಸಾಕ್ಷಿ ಮುಂದುವರೆದು ಅವನು ಸಹ ಸ್ಥಳದಲ್ಲಿ ಇದ್ದನು. ಅವನಿಗೂ ಸಹ ಅಪಘಾತ ದಲ್ಲಿ ಗಾಯಗಳು ಆಗಿದ್ದವು ಆಗ ನನ್ನನ್ನು ಮತ್ತು ಸದರಿ ಮೋಟರ ಸೈಕಲ ಸವಾರನ್ನು ಅಂಬುಲೆನ್ಸ ಮೂಲಕ ನಾವು 3 ಜನ ಗಾಯಾಳುಗಳನ್ನು ಆಸ್ಪತ್ರೆ ಗೆ ಕರೆದುಕೊಂಡು ಹೊದರು. ನಾನು ಹೇಳುತ್ತಿರುವ ಅಪಘಾತ ಉಂಟು ಮಾಡಿದ ಮೋಟರ ಸೈಕಲ ನನ್ನ ಮೋಟರ ಸೈಕಲ ಬಂದು ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆ ಗೆ ಹೊದಾಗ ವೈದ್ಯರು ಆಸ್ಪತ್ರೆ ಯಲ್ಲಿ ಇದ್ದರು. ಅಪಘಾತ ಕುರಿತು ವೈದ್ಯರಿಗೆ ನಾನು ತಿಳಿಸಿರುತ್ತೇನೆ. ವೈದ್ಯರಿಗೆ ನಾನು ಹಿರೊ ಹೊಂಡಾ ಮೋಟರ ಸೈಕಲ ದಿಂದ

ಅಪಘಾತ ಆಗಿದೆ ಎಂದು ತಿಳಿಸಿರುತ್ತೇನೆ. ನನ್ನ ಮಗ ನಮ್ಮನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ದೂರು ಕೊಟ್ಟಿರುತ್ತಾನೆ. ಅಪಘಾತ ದಿನ ದೂರು ಕೊಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಅಪಘಾತ ಜರುಗಿರುವುದಿಲ್ಲ ಪೊಲಿಸರೊಂದಿಗೆ ಮಿಲಾಪಿ ಆಗಿ ಮಾರನೇ ದಿನ ಪೊಲಿಸ ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಆಸ್ಪತ್ರೆ ಯಲ್ಲಿ ನಾನು 8-10 ದಿನಗಳವರೆಗೆ ಒಳರೂಗಿ ಆಗಿ ದಾಖಲಿದ್ದೇನು. ಆಸ್ಪತ್ರೆ ಯಲ್ಲಿ ನನಗೆ ಸಂಪೂರ್ಣ ಗುಣಮುಖವಾಗಿದ ನಂತರ ಬಿಡುಗಡೆ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಗಾಗ ಬಂದು ತೊರಿಸಿಕೊಂಡು ಹೊಗಿ ಅಂತಾ ಡಿಸಚಾರ್ಜ ಮಾಡಿದರು ಎಂದು ನುಡಿದಿರುತ್ತಾರೆ. ನಾನು ಡಿಸಚಾರ್ಜ ಆದ ನಂತರ 4-5 ಸಲ ಪುನಃ ಆಸ್ಪತ್ರೆಗೆ ಚಿಕಿತ್ಸೆ ಕುರಿತು ಹೊಗಿರುತ್ತೇನೆ. ಗಂಗಾ ಆಸ್ಪತ್ರೆಯವರಿಗೆ ಅಂಗ ನ್ಯೂನತೆ ಪ್ರಮಾಣ ಪತ್ರ ಕೊಡುವಂತೆ ಕೇಳಿರುತ್ತೇನೆ. ಅವರು ಅಂಗ ನ್ಯೂನತೆ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ನನಗೆ ಅಂಗ ನ್ಯೂನತೆ ಇಲ್ಲ ಅಂತಾ ಗಂಗಾ ಆಸ್ಪತ್ರೆ ವೈಧ್ಯರು ನನಗೆ ಅಂಗ ನ್ಯೂನತೆ ಪ್ರಮಾಣ ಪತ್ರ ಕೊಡಲು ನಿರಾಕರಿಸಿದ್ದರಿಂದ ನಾನು ಬೈಲಹೊಂಗಲನ ಡಾ. ಮುದುಕನಗೌಡರ ಹತ್ತಿರ ಬಂದು ಅಂಗ ನ್ಯೂನತೆ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಡಿಸಚಾರ್ಜ ಆದ ನಂತರ ಗಂಗಾ ಆಸ್ಪತ್ರೆ ಗೆ ಪುನಃ ಪಾಲೊಅಪ ಚಿಕಿತ್ಸೆ ಕುರಿತು ಹೊಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಆಸ್ಪತ್ರೆ ಮತ್ತು ಇತರೆ ಖರ್ಚು ರೂ. 90 ಸಾವಿರ ಆಗಿರುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ನಿರಂತರ ಚಿಕಿತ್ಸೆ ಕುರಿತು ರೂ. 40 ಸಾವಿರ

ಮತ್ತು ಪ್ರತಿ ವರ್ಷಕ್ಕೆ ರೂ 5 ಸಾವಿರ ತಗುಲುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ನನಗೆ 3 ಎಕರೆ ಮಳೆ ಆಶ್ರಿತ ಜಮಿನು ಇರುತ್ತದೆ. ಹೀಗಾಗಿ ಮಳೆ ಆದರೆ ಮಾತ್ರ ಬೆಳೆ ಬರುತ್ತದೆ ಎಂದರೆ ಸರಿ. ನಾನು ತಿಂಗಳಿಗೆ ರೂ. 30 ಸಾವಿರ ಸಂಪಾದಿಸುತ್ತಿದ್ದೇನು ಮತ್ತು ಅದು ಮುಂದೆ ರೂ 35 ಸಾವಿರಕ್ಕಿಂತ ಹೆಚ್ಚಾಗುತ್ತಿತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಕೃಷಿ ಕೆಲಸ ಜೊತೆಗೆ ಹೈನುಗಾರಿಗೆ, ಕೊಳಿ ಮತ್ತು ಆಡುಗಳ ಸಾಕಾಣಿಕೆ ಪಾರ್ಮ ಮಾಡಿಕೊಳ್ಳಬೇಕು ಎಂಬ ಇಚ್ಚೆ ಹೊಂದಿದ್ದೇನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಆದ ಎಲ್ಲ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿದ್ದು ನನಗೆ ಈಗ ಯಾವುದೇ ಅಂಗ ನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರೊಂದಿಗೆ ಮಿಲಾಪಿ ಆಗಿ ಅತೀ ಹೆಚ್ಚು ಪ್ರಮಾಣದ ಅಂಗ ನ್ಯೂನತೆ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ದಲ್ಲಿ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನಮ್ಮ ಮೋಟರ ಸೈಕಲಗೆ ವಿಮೆ ಇಲ್ಲದ ಕಾರಣ ಹೇಗಾದರು ಮಾಡಿ ಪರಿಹಾರ ಹಣ ಪಡೆಯಬೇಕೆಂದು ಪೊಲಿಸರೊಂದಿಗೆ ಮಿಲಾಪಿ ಆಗಿ ಖೊಟ್ಟಿ ದಾಖಲೆ ಸೃಷ್ಟಿಸಿ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೀಗಾಗಿ ನಾನು ಕೇಳಿರುವಂತೆ ಪರಿಹಾರ ಹಣ ಕೊಡು ವಿಮಾ ಕಂಪನಿಯವರು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ನೇ ಎದುರುದಾರರ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.